**ಕತೆ**

## ಬನವಾಸಿ ವೆಂಕಟೇಶ ದೀಕ್ಷಿತ್

ಕಲೆ: ಸಂತೋಷ್ ಸಸಿಹಿತ್ಲು,
ರೇಖಾಚಿತ್ರ: ಜಬೀವುಲ್ಲಾ ಎಂ. ಅಸದ್

# ಮಾವಿನಕುರ್ವೆ ಬೀಗ

ಎಳೆಬಿಸಿಲು ಎದುರುಮನೆ ತಾರಸಿಮೇಲೆ ಆಗಷ್ಟೆ ಬಿದ್ದಿತ್ತು. ಯಾವಾಗಿನ ಜಾಗದಲ್ಲಿ ಕುಳಿತ ಈಶ್ವರಮಾವನ ಕೈಯಲ್ಲಿ ಚಹದ ಕಪ್ಪು ಹಿಡಿಸಿ ಕುಡಿದಾದಮೇಲೆ ಅಲ್ಲೆ ಟೀಪಾಯಿ ಮೇಲಿಡು ಅಂತ ಹೇಳಿ ಕೆಳಗಿಳಿದು ಹೋಗಿದ್ದಳು ಶುಭಾ. ಅವಳ ಸ್ವರಕ್ಕೆ ಅಧೀನನಾದ ಈಶ್ವರ ಹೇಳಿದಷ್ಟು ಮಾಡಿ ಕುಳಿತಿರುತ್ತಿದ್ದ. ಎದುರುಮನೆ ತಾರಸಿಮೇಲೆ ಅವಳು ಬಂದಳು. ಮಾಮೂಲಿನಂತೆ ಕುಳಿತ ಇವನತ್ತ ಅಯಾಚಿತವಾಗಿ ಒಮ್ಮೆ ದೃಷ್ಟಿ ಹಾಯಿಸಿದವಳು ತನ್ನ ಬಟ್ಟೆ ಒಣಗಿಸುವ ಕೆಲಸದಲ್ಲಿ ಮಗ್ನಳಾದಳು. 'ಮಾವಿನಕುರ್ವೆ... ಮಾವಿನಕುರ್ವೆ...' ಮತ್ತೆ ಮತ್ತೆ ಗೊಣಗುವ ಸ್ವರ ಕೇಳಿದ ಶುಭಾ ಮಗಳನ್ನು ಶಾಲೆಗೆ ತಯಾರು ಮಾಡುತ್ತಿದ್ದವಳು, 'ಇವತ್ತ್ಯಾಕೊ ಜೋರಾಗದೆ ಇವನ ಮಾವಿನಕುರ್ವೆ. ಅದು ಯಂತದು ಅಂತ ನಿಮ್ಮನ್ನ ಕೇಳಿದ್ರೆ ಈ ಕಡೆ ಜ್ಞಾನವೆ ಇಲ್ಲೋರ ಮಾತಿಗೆ ಎಂತಾ ಅರ್ಥವೇ ಅಂತ ಮಶ್ಕಿರಿ ಮಾಡತ್ರಿ. ಅದೇ ಶಬ್ದ ಎಂತಕ್ಕೆ ಅವ ಅಷ್ಟು ಹೇಳೂದು?' ಅಂದವಳಿಗೆ ರೂಮಿನಲ್ಲಿ ತನ್ನ ತಯಾರಿಯಲ್ಲಿದ್ದ ಶಂಕರ, 'ನಿಂದೊಳ್ಳೇ ಕತೆ! ಒಂದಿನ ಹುಡುಕ್ಕಂಡು ಹೋಗಿ ಅಗಿಯುವಾ. ಕೊಪ್ಪರಿಗೆ ಬಂಗಾರ ಸಿಗ್ತದೆ...' ಅಂತ ಗೇಲಿ ಮಾಡುತ್ತ ಬಂದವ, 'ನಂಗೆ ದೋಸೆ ಕೊಡು, ಹೊತ್ತಾಯ್ತು...' ಅನ್ನುತ್ತ ಪ್ಲೇಟು ಹಾಕಿಕೊಂಡು ಕುಳಿತ.

ಈಗ ಕೆಲ ದಿನಗಳಿಂದ ಈಶ್ವರನಿಗೆ ಆ ದೃಶ್ಯ ನೋಡುತ್ತಿದ್ದಂತೆ ಒಳಗಿಂದ ಏನೋ ಎದ್ದುಬರಲು ಹವಣಿಸುವಂತೆನ್ನಿಸಿ ಚಡಪಡಿಸುತ್ತಿದ್ದ. ಆಮೇಲದು ತಣ್ಣಗಾಗುತ್ತ ಎಂದಿನಂತೆ ಕುಳಿತಿರುತ್ತಿದ್ದ. ಇವತ್ತು ಒಳಗಿನ ಚಡಪಡಿಕೆ ಸುಳಿಗಾಳಿಯ ರೂಪ ಪಡೆಯತೊಡಗಿತು. ಅತ್ತಿತ್ತಲಿದ್ದುದನ್ನು ಜಾಡಿಸಿ ಕೆಡವಿ ದಾರಿ ಮಾಡಿಕೊಳ್ಳುತ್ತ ಹೊರನುಗ್ಗುವಾಗ ಗಾಳಿಯ ರಭಸಕ್ಕೆ ಒಣಹಾಕಿದ ಸೀರೆಗಳು ಒಂದರ ಹಿಂದೊಂದು ಸುಯ್ ಎಂದು ಕಣ್ಣೆದುರು ತೇಲಿ ಹೋಗುತ್ತ ಹೋಗುತ್ತ ಧಿಂ ಅನ್ನುವ ತಲೆಯನ್ನು ಗಟ್ಟಿಯಾಗಿ ಒತ್ತಿ ಹಿಡಿದುಕೊಂಡ. ಒಳಗಿಂದ ಯಾರೋ ಮಿದುಳನ್ನು ಪದರಪದರಾಗಿ ಸೀಳಿ ಹರಿದುಕೊಂಡು ಹೊರಬರುತ್ತಿರುವಂತೆ ತಲೆಯಲ್ಲೆದ್ದ ತಾಳಲಾರದ ಯಾತನೆಗೆ ಕಣ್ಣಿಗೆ ಗಾಢಕತ್ತಲೆ ಕವಿದುಕೊಂಡು ಮೊಳಕಾಲ ಸಂದಿನಲ್ಲಿ ತಲೆ ಒತ್ತಿ ಹುದುಗಿಸಿಕೊಂಡು ಅವ್ವೀ ಅಂತ ಚೀರಿಕೊಂಡ. ಎಷ್ಟೋ ಕಾಲ ಉಕ್ಕಿ ಮೊರೆದ ಸಮುದ್ರ ನಿಧಾನವಾಗಿ ಇಳಿಯುತ್ತ ಶಾಂತವಾಗುತ್ತ ಲಯಬದ್ಧವಾದ ಹದಕ್ಕೆ ಬಂದಿದೆ ಅನಿಸುವ ಹೊತ್ತಿಗೆ ಹಗುರವಾಗಿ ಕಣ್ಣು ತೆರೆದ. ಅವನು ಪ್ಲಾಸ್ಟಿಕ್ ಕುರ್ಚಿಯಲ್ಲಿ ಕುಳಿತಿದ್ದ. ಬಾಗಿಲಿಂದ ಎದುರು ಮನೆ ತಾರಸಿ ಕಾಣುತ್ತಿದೆ. ಹಗ್ಗದಮೇಲೆ ಒಣಹಾಕಿದ ಬಟ್ಟೆಗಳು ಬಿಸಿಲಲ್ಲಿ ಅಲೆಯಾಡುತ್ತಿವೆ. ಕುಳಿತ ರೂಮಿನಲ್ಲಿ ಕಣ್ಣಾಡಿಸಿದ. ಸಣ್ಣ ರೂಮು, ಆಚೆಗೊಂದು ಕಿಡಕಿಯಿದೆ. ಬಲಕ್ಕೆ ಕೆಳಗಿಳಿದುಹೋಗುವ ಮೆಟ್ಟಿಲು. ಅಪರಿಚಿತ ಜಾಗ. ತಾನೆಲ್ಲಿದ್ದೇನೆ ಗೊತ್ತಾಗಲಿಲ್ಲ. ಯಾಕೆ ಇಲ್ಲಿದ್ದೇನೆ ಅನ್ನುವ ಪ್ರಶ್ನೆ ಮೂಡಿ ತಲೆ ಕೆರೆದುಕೊಂಡ. ಹಿಂದೆಮುಂದೆ ಗೊತ್ತಾಗದೆ ಗಾಬರಿಯಾದ. ನಿಧಾನಕ್ಕೆ ಮೇಲೆದ್ದ. ರೂಮಿಗೆ ತಾಗಿದ್ದ ಬಾಗಿಲು ತೆರೆದುಕೊಂಡು ಒಳಗೆ ಹೋದ. ಇಂತಹದನ್ನು ಹೊಸದಾಗಿ ಕಾಮತರ ಮನೆಯಲ್ಲಿ ಮಾಡಿಸಿದ್ದು ನೋಡಿದ್ದ. ಕಕ್ಕಸು. ಎದುರು ಗೋಡೆಗೆ ದೊಡ್ಡ ಕನ್ನಡಿ ಕಂಡಿತು. ಅಯಾಚಿತವಾಗಿ ಅದರೆದುರು